CC No.2335/2022
CW-3 PW-3

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 2335/2022**

**ಹೆಸರು** :- **ಪ್ರಶಾಂತ ಡಿ ಎಸ್**

**ತಂದೆಯ ಹೆಸರು** :- **ಶ್ರೀಧರ ಡಿ. ಆರ್**

**ವಯಸ್ಸು** :- **41 ವರ್ಷ**

**ಉದ್ಯೋಗ** :- **ಖಾಸಗಿ ಕೆಲಸ**

**ಸ್ಥಳ** :- **ಚಿಕ್ಕಪೇಟೆ, ಸೊರಬ**

**ದಿನಾಂಕಃ 22.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 14.02.2022 ರಂದು ರಾತ್ರಿ 9.00 ರಿಂದ 10.00 ಗಂಟೆ ಸಮಯದಲ್ಲಿ ಖಾ.ನಂ.130 ರಲ್ಲಿರುವ ಕಾರ ಶೆಡ್ ನಲ್ಲಿ ಚಾಸಾ-2 ರವರಿಗೆ ಅನಾರೋಗ್ಯ ಉಂಟಾಗಿದ್ದರಿಂದ ಚಾಸಾ-1 ರವರು ಚಾಸಾ-2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಕಾರ ಶೆಡ್ ನಲ್ಲಿರುವ ಕಾರನ್ನು ತೆಗೆಯಲು ಬಂದಾಗ 1 ರಿಂದ 5 ನೇ ಆರೋಪಿತರು ನಮ್ಮ ಜಾಗಕ್ಕೆ ಅತ್ರಿಕಮ ಪ್ರವೇಶ ಮಾಡಿ, 1 ಮತುತ 2 ನೇ ಆರೋಪಿತರು ಚಾಸಾ-1 ರವರಿಗೆ ಹಕ್ಲಾಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. 1 ಮತ್ತು 2 ನೇ ಆರೋಪಿತರು ನನಗೂ ಮತ್ತು ಚಾಸಾ-1, 2 ರವರಿಗೆ ನೀವು ಪುರಸಭೆ ಸದಸ್ಯರಾಗಿರಬಹುದು, ಗಲಾಟೆಗೆ ಚಾಸಾ-3 ರವರನ್ನು ಕರೆದುಕೊಂಡು ಬರುತ್ತೀರಾ

ನೀವು ನಮ್ಮನ್ನು ಏನೂ ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳಿರುತ್ತಾರೆ. ನನ್ನ ತಮ್ಮ ಪ್ರಸನ್ನ ರವರಿಗೆ ಆದ ಗತಿಯೇ ನಿಮಗೆ ಆಗುವುದು. ನಿಮ್ಮನ್ನು ಜೈಲಿಗೆ ಕಳುಹಿಸುತ್ತೇನೆ ಎಂದು ಹೇಳಿರುತ್ತಾರೆ. 2 ನೇ ಆರೋಪಿಯು ಚಾಸಾ-1 ರವರ ಕೂದಲನ್ನು ಹಿಡಿದು ಎಳೆದಾಡಿ ನೆಲಕ್ಕೆ ಕೆಡವಿರುತ್ತಾರೆ. ಚಾಸಾ-1 ರವರು ನೆಲಕ್ಕೆ ಬಿದ್ದಾಗ 1 ಮತ್ತು 3 ನೇ ಆರೋಪಿತರು ಚಪ್ಪಲಿ ಕಾಲಿನಿಂದ ಒದ್ದು ಹಲ್ಲೆ ಮಾಡಿರುತ್ತಾರೆ. 2, 4 ಮತ್ತು 5 ನೇ ಆರೋಪಿತರು ಚಾಸಾ-1 ರವರ ಎದೆಗೆ ಗುದ್ದಿ ನೋವು ಮಾಡಿರುತ್ತಾರೆ. ಇದರಿಂದ ಚಾಸಾ-1 ರವರು ಅಸ್ವಸ್ಥರಾಗಿರುತ್ತಾರೆ. ಆಗ 1 ಮತ್ತು 3 ನೇ ಆರೋಪಿತರು ಚಾಸಾ-1 ರವರ ಬಟ್ಟೆಯನ್ನು ಹಿಡಿದು ಎಳೆದಾಡಿರುತ್ತಾರೆ. ಆರೋಪಿತರೆಲ್ಲರೂ ಈ ಜಾಗಕ್ಕೆ ಬಂದರೆ ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ. ಆಗ ಸ್ಥಳದಲ್ಲಿ ನಾನು ಮತ್ತು ಚಾಸಾ-4 ರವರು ಚಾಸಾ-1 ರವರನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತೇವೆ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು, ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಚಾಸಾ-1 ರವರ ಮೇಲೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಈ ದಿನ 1 ಮತ್ತು 2 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಿದ್ದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 3 ರಿಂದ 5 ನೇ ಆರೋಪಿತರು ಗೈರು ಹಾಜರಿದ್ದು, ಆರೋಪಿ ಪರ ವಕೀಲರು 3 ರಿಂದ 5 ನೇ ಆರೋಪಿತರ ಗುರುತಿಸುವಿಕೆಯಲ್ಲಿ ಯಾವುದೇ ತಕರಾರು ಇಲ್ಲ ಎಂದು ವಿನಾಯಿತಿ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದುಕೊಂಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು).**

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ</u>**

2 ಮತ್ತು 4, 5 ನೇ ಆರೋಪಿತರು ಚಾಸಾ-1 ರವರನ್ನು ನೆಲಕ್ಕೆ ಬಿದ್ದ ಮೇಲೆ ಚಪ್ಪಲಿ ಕಾಲಿನಿಂದ ಸಾರ್ವಜನಿಕ ಸ್ಥಳದಲ್ಲಿ ಒದ್ದಿರುವುದರಿಂದ ಅವರ ಮಾನಕ್ಕೆ ಕುಂದುಂಟಾಗಿರುತ್ತದೆ ಅಂದರೆ ಸರಿ.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ. ಎ.ಸಿ.ವೈ. ವಕೀಲರಿಂದಃ</u>**

ಆರೋಪಿತರ ಮತ್ತು ನಮ್ಮ ಕುಟುಂಬದ ನಡುವೆ ಇರುವ ಓಣಿ ಸಂಬಂಧ ಒಂದು ಸಿವಿಲ್ ಪ್ರಕರಣ ಚಾಲ್ತಿಯಲ್ಲಿದೆ ಅಂದರೆ ಸರಿ. ಆರೋಪಿಯ ಮನೆಯ ಪಶ್ಚಿಮ ದಿಕ್ಕಿನಲ್ಲಿರುವ ಸಿ.ಸಿ. ಕ್ಯಾಮರಾವನ್ನು ನನ್ನ ಸಹೋದರ ಕಳ್ಳತನ ಮಾಡಿದ್ದಾನೆ ಎಂದು ದಿಃ14.02.2022 ರಂದು ಸಂಜೆ 6.30 ಕ್ಕೆ 1 ನೇ ಆರೋಪಿತರು ಒಂದು ದೂರನ್ನು ಸಲ್ಲಿಸಿರುತ್ತಾರೆ ಅಂದರೆ ಸರಿ. ಆ ಕಾರಣ ನಾವು ಆರೋಪಿತರ ಮೇಲೆ ಪ್ರಕರಣ ರಾಜಿ ಮಾಡಿಕೊಳ್ಳುವಂತೆ ಪೊಲೀಸರ ಮುಖಾಂತರ ಒತ್ತಡ ಹೇರಿ ಅವರು ಒಪ್ಪದೇ ಇದ್ದ ಕಾರಣ ಅದೇ ದಿನ ರಾತ್ರಿ 9.30 ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ. ಘಟನೆ ಆಗುವ ಕಾಲಕ್ಕೆ ನಾನು ನನ್ನ ಮನೆಯ ಶೆಡ್ ನಲ್ಲಿರುತ್ತೇನೆ. ನಾನು ಓಡಿ ಬರುವಷ್ಟರಲ್ಲಿ ಆರೋಪಿತರು ಚಾಸಾ-1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ ಅಂದರೆ

ಸರಿಯಲ್ಲ. ಗಲಾಟೆ ಆದ ನಂತರ ಚಾಸಾ–1 ಮತ್ತು 2 ರವರು ತಮ್ಮ ಕಾರ ತೆಗೆದುಕೊಂಡು ದೂರನ್ನು ದಾಖಲಿಸಲು ಹೋಗಿರುತ್ತಾರೆ ಅಂದರೆ ಸರಿಯಲ್ಲ. ನಾವು 1 ನೇ ಆರೋಪಿಯ ಮೇಲೆ ಮೂರು ನಾಲ್ಕು ಬಾರಿ ಹಲ್ಲೆ ಮಾಡಿರುತ್ತೇವೆ. ಆ ಕಾರಣ ಅವರು ನಮ್ಮ ವಿರುದ್ಧ ದೂರು ದಾಖಲಿಸಿದ್ದಕ್ಕೆ ನಾವು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಮನೆಯ ಅಕ್ಕಪಕ್ಕದಲ್ಲಿ ಸಿ.ಸಿ. ಕ್ಯಾಮೇರಾಗಳನ್ನು ಅಳವಡಿಸಿರುತ್ತೇವೆ ಅಂದರೆ ಸರಿ. ನಾನು ಹೇಳಿದಂತೆ ಘಟನೆ ದಿನ ಆರೋಪಿತರು ಚಾಸಾ–1 ರವರ ಮೇಲೆ ಯಾವುದೆ ಹಲ್ಲೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಹೆಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ–1 ರವರಿಗೆ ಆಸ್ಪತ್ರೆಗೆ ದಾಖಲಿಸುವ ಪೂರ್ವದಲ್ಲಿಯೇ ಆರೋಪಿತರೆಲ್ಲರೂ ಸೊರಬ ಪೊಲೀಸ್ ಠಾಣೆಯಲ್ಲಿ ಹಾಜರಿದ್ದು, ದೂರು ಸಲ್ಲಿಸುತ್ತಿದ್ದರು ಅಂದರೆ ಸರಿಯಲ್ಲ. 1 ನೇ ಆರೋಪಿತರು ದೂರನ್ನು ದಾಖಲಿಸಿದ ನಂತರ ಮನೆಗೆ ಬರುವಷ್ಟರಲ್ಲಿ 10.30 ಆಗಿರುತ್ತದೆ ಅಂದರೆ ಸರಿಯಲ್ಲ. ಆರೋಪಿತರ ಮನೆಯಲ್ಲಿ ಗುರುಪ್ರಸಾದ ರವರನ್ನು ಹೊರತುಪಡಿಸಿ ಬೇರೆ ಯಾರು ಗಂಡು ಮಕ್ಕಳು ಇಲ್ಲ ಅಂದರೆ ಸರಿಯಲ್ಲ. ಆರೋಪಿತರಿಗೆ ನಮ್ಮ ಕುಟುಂಬವನ್ನು ಎದುರುಹಾಕಿಕೊಳ್ಳುವ ಸಾಮರ್ಥ್ಯ ಇಲ್ಲ ಅಂದರೆ ಸರಿಯಲ್ಲ. ನಾನು ಹೇಳಿದಂತ ಘಟನಾ ದಿನ ಸ್ಥಳದಲ್ಲಿ ಹಾಜರಿರಲಿಲ್ಲಿ ಅಂದರೆ ಸರಿಯಲ್ಲ. ಚಾಸಾ–1 ರವರು ನನ್ನ ಅತ್ತಿಗೆಯಾಗಿರುವುದರಿಂದ ಅವರ ಪರವಾಗಿ ಸುಳ್ಳು ಹೇಳುತ್ತಿದ್ದೇನೆ ಅದರೆ ಸರಿಯಲ್ಲ. ಈ ಪ್ರಕರಣವನ್ನು ದಾಖಲಿಸಲು ನಾನೇ ಸಂಪೂರ್ಣ ಕಾರಣ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**